(ಇಂದು ದಿನಾಂಕ:23-07-2026 ರಂದು ಸಾಕ್ಷಿದಾರರನ್ನು ಕರೆಯಿಸಲಾಯಿತು, ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ: ಎದುರುದಾರರ ನಂ.2 ರವರ ಪರ ಶ್ರೀ ಎಸ್ ಎನ್ ಎಮ್ ವಕೀಲರಿಂದ :-**

ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ.

ನಾನು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡುತ್ತಿದ್ದೇನೆ. ಸಾಕ್ಷಿಯು ಕೆಳಕಂಡ ದಾಖಲಾತಿಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈ ಕೆಳಕಂಡಂತೆ ನಿಶಾನೆಯಾಗಿ ಗುರುತಿಸಲಾಯಿತು.

| | |
|---|---|
| ನಿ.ಆರ್.1 | ಅಧಿಕಾರ ಪತ್ರ |
| ನಿ.ಆರ್.2 | ವಿಮಾ ಪಾಲಸಿ |

**ಪಾಟೀ ಸವಾಲುಃ ಅರ್ಜಿದಾರ ಪರ ಶ್ರೀ ಬಿ ಎಸ್ ಬಿ ವಕೀಲರಿಂದ**

1. ಎರಡು ವರ್ಷದಿಂದ ನಾನು ವಿಮಾ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಎದುರುದಾರ ನಂ.1 ರವರ ವಿರುದ್ದ ಮಾತ್ರ ದೋ.ಪ. ಸಲ್ಲಿಸಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅರ್ಜಿದಾರರಿಗೆ ಅನುಕೂಲವಾಗಲೇಂದು ಎದುರುದಾರ ನಂ.1 ಇವರ ಮೇಲೆ ದೋ.ಪ. ಸಲ್ಲಿಸಿರುತ್ತಾರೆ ಎಂದು ನುಡಿಯುತ್ತಾರೆ. ದೋ.ಪ. ವನ್ನು ನಾನು ಪ್ರಶ್ನಿಸಿಲ್ಲ. ಆ ಸಮಯದಲ್ಲಿ ನಾವು ಪಕ್ಷಗಾರರಾಗಿ ಇಲ್ಲದ ಕಾರಣ ಪ್ರಶ್ನಿಸಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಪೋಲೀಸರಿಗೆ ಸಲ್ಲಿಸಿದ ವಾಹನದ ದಾಖಲೆಗಳನ್ನು ನಾವು ಪಡೆಯಬೇಕಾಗಿದ್ದು, ಪಡೆದುಕೊಂಡಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ವಾಹನದ ಮಾಲೀಕರು ಪೋಲೀಸರಿಗೆ ವಾಹನದ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.
2. ಎದುರುದಾರ ನಂ.1 ರವರ ತಪ್ಪಿನಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಪರಿಹಾರ ಕೊಡುವುದನ್ನು ತಪ್ಪಿಸಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ರ ಪ್ರಕಾರ ಅಪಘಾತದ ದಿನ ಅರ್ಜಿದಾರರು ವಾಹನ ಚಲಾಯಿಸುತ್ತಿರಲಿಲ್ಲ ಎಂದರೆ ಸರಿಯಲ್ಲ.

ಎದುರುದಾರ ನಂ.1 ಮತ್ತು 3 ರವರಿಗೆ ವಾಹನದ ದಾಖಲೆಗಳನ್ನು ಪೂರೈಸಲು ನಮ್ಮ ವಕೀಲರ ಮುಖಾಂತರವಾಗಲೀ ಅಥವಾ ಕಂಪನಿ ವತಿಯಿಂದ ಆಗಲೀ ನೋಟೀಸ್ ನೀಡಿಲ್ಲ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ಅಂಶಗಳನ್ನು ಬರೆಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಎದುರುದಾರ ನಂ.1 ಮತ್ತು 3 ರವರ ಪರ ಶ್ರೀ ಎನ್ ಆರ್ ಜಿ ವಕೀಲರಿಂದ**

1. ವಾಹನದ ದಾಖಲೆಗಳನ್ನು ಪರೀಶೀಲಿಸಿ ವಿಮಾ ಪಾಲಸಿಯನ್ನು ನೀಡುತ್ತೀರಾ ಎಂದು ಸೂಚಿಸಿದಾಗ ಸಾಕ್ಷಿಯು ನಾವು ಆರ್ ಸಿ ದಾಖಲೆಯನ್ನು ನೋಡಿ ವಿಮಾ ಪಾಲಸಿಯನ್ನು ನೀಡಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ. ವಾಹನದ ಎಲ್ಲಾ ದಾಖಲೆಗಳನ್ನು ಪರೀಶೀಲಿಸದೇ ವಿಮಾ ಪಾಲಸಿ ನೀಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರ ಕೊಡುವುದನ್ನು ತಪ್ಪಿಸಲು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯನ್ನು ವಿಚಾರಿಸಿ ನಂತರ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ,

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು,
ಸಿಂಧನೂರು